ಒಬ್ಬಾತನಿದ್ದರೆ ನಮ್ಮ ಬೀಪಿಯಾದ್ರೂ ಏರುವುದಿಲ್ಲವಲ್ಲ... ಏನಂತೀರಿ!' ತನ್ನ ಮಾತಿಗೆ ತಾನೇ ನಗುತ್ತ ಹೇಳಿದ ಮೆನನ್.

ಶರ್ಮರು ಮುಖದ ಬಿಗಿ ಸಡಿಲಿಸದೆಯೇ 'ನೋಡೋಣ ಏನು ಮಾಡಲಾಗುತ್ತದೆ ನೋಡುತ್ತೇನೆ. ನೀನು ಕೂಡ ನಿನಗೆ ಹೇಳಿದ ನೀಲಿನಕ್ಷೆ ತಯಾರು ಮಾಡು, ನಾವು ಭವಿಷ್ಯತ್ತಿನ ಯಾವುದೇ ಆಗುಹೋಗುಗಳಿಗೂ ತಯಾರಾಗಿರಬೇಕು. ಯಾರನ್ನಾದರೂ ಒಬ್ಬರನ್ನೇ ನಂಬಿ ಕೂತರೆ ಇದೇ ಸಮಸ್ಯೆ... ತಿಳೀತಾ? ನಾಳೆ ಏನಾಗುತ್ತದೋ ನೋಡೋಣ' ಅಂದರು.

ಮೆನನ್ ಮಾತ್ರವಲ್ಲ, ಇಡೀ ಕಂಪೆನಿಯ ಎಲ್ಲ ನೌಕರರಿಗೂ ಶರ್ಮರನ್ನು ಇಂತಹ ಇಕ್ಕಟ್ಟಿಗೆ ಸಿಲುಕಿಸಿ ಛೇಡಿಸುವುದೆಂದರೆ ಎಲ್ಲಿಲ್ಲದ ಉತ್ಸಾಹ. ನೌಕರರ ಒಂದೂ ಅಳಲನ್ನು ಮ್ಯಾನೇಜ್‌ಮೆಂಟಿನ ಗಮನಕ್ಕೆ ತರಲು ಹಿಂಜರಿಯುವ, ಆದರೆ ಮ್ಯಾನೇಜ್‌ಮೆಂಟಿನ ಎಲ್ಲ ಸಮಸ್ಯೆ, ಸೂಚನೆಗಳನ್ನು ವಿಶದವಾಗಿ ಎಲ್ಲ ನೌಕರರಿಗೆ ತಂದೊಪ್ಪಿಸುವ ಶರ್ಮರಿಗೆ ಈ ರೀತಿ ಉಪದ್ರ ಕೊಟ್ಟು ಅವರೆಲ್ಲ ಒಳಗೊಳಗೇ ಸಂತೋಷ ಪಟ್ಟುಕೊಳ್ಳುತ್ತಿದ್ದರು.

**ಮೆನನ್ ಮೀಸೆಯಡಿಯಲ್ಲೇ ನಕ್ಕ. ಅವರು ತನ್ನನ್ನು ಬೈಯಲಿಕ್ಕೇ ಕರೆದಿರಬಹುದಾದರೂ ತನಗೆ ಇದೊಂದು ಅವಕಾಶ. ಅವಕಾಶ ಸಿಗುವುದು ಅಂದರೆ ಹೀಗೆ. ಸಿಕ್ಕ ಅವಕಾಶಗಳನ್ನು ತನ್ನ ಅನುಕೂಲಕ್ಕೆ ತಿರುಚಿ ಸಾರ್ಥಕಗೊಳಿಸಿಕೊಳ್ಳುವುದು ಚಾಲೆಂಜು. ಬಿಸಿಯಿದ್ದಾಗಲೇ ಬಡಿದುಬಿಡಬೇಕು...**

ಬೇರೆ ಕಂಪೆನಿಯಲ್ಲಿ ಒಳ್ಳೆಯ ಆಫರ್ ಬಂದಿದೆ, ಕೆಲಸ ಬಿಡುತ್ತೇನೆ ಅಂತ ಗೌರವ್ ಪ್ರಾಮಾಣಿಕವಾಗಿ ಬಂದು ಹೇಳಿದ್ದೇ ತಡ, ಮೆನನ್ ಮನಸ್ಸಿನಲ್ಲಿ ಹೊಸತೊಂದು ಮಿಂಚು ಸುಳಿದಿತ್ತು. ಗೌರವನನ್ನು ಕೂರಿಸಿಕೊಂಡು ಬಾಗಿಲು ಹಾಕಿ ಗುಟ್ಟಿನಲ್ಲಿ 'ಸಂಬಳ ಜಾಸ್ತಿ ಸಿಗುತ್ತಿದೆ ಎನ್ನುವ ಕಾರಣಕ್ಕೆ ರಾಜೀನಾಮೆ ಕೊಟ್ಟು ಹೋಗುವವನು ನೀನು. ಇಲ್ಲಿ ಸಂಬಳ ಜಾಸ್ತಿಕೊಟ್ಟರೆ ಇಲ್ಲಿಯೇ ನಿಲ್ಲುತ್ತೀಯಾ?' ಕೇಳಿದ್ದ ಮೆನನ್.

'ಇಲ್ಲಿ ಅಷ್ಟು ಸಿಗುವುದಿಲ್ಲ ಎನ್ನುವ ವಿಷಯ ಗೊತ್ತಿದ್ದೇ ಹೊರಗೆ ಇತರ ಕಡೆ ಪ್ರಯತ್ನಿಸಿದ್ದು... ನಿಮಗೂ ಗೊತ್ತಿದೆ... ಇಲ್ಲಿ ಅಷ್ಟು ಜಂಪ್ ಸಾಧ್ಯವಾ?' ಅಂದಿದ್ದ ಗೌರವ್. ಹಾಗೆ ಮಾತು ಆರಂಭಿಸಿದ ಮೆನನ್, ಗೌರವನಿಗೆ ಬುದ್ಧಿ ಹೇಳುವ ಸೋಗಿನಲ್ಲಿ ಆತನಲ್ಲಿ ಬಹಳಷ್ಟು ಹೊತ್ತು ಚರ್ಚಿಸಿದ್ದ. ನಮ್ಮ ಕಂಪೆನಿಯಲ್ಲಿ ಇಷ್ಟು ಇನ್‌ಕ್ರಿಮೆಂಟ್ ಕೊಡಬಹುದು ಅಂತ ನಾನೆಣಿಸುವುದಿಲ್ಲ ಸರ್ ಅಂತ ಹೇಳಿದ ಗೌರವನಿಗೆ 'ನನ್ನ ಕೊನೇ ಮಾತು ಕೇಳು. ಹೋಗುವವನು ಹೇಗೂ ಹೋಗುತ್ತೀಯಾ... ಒಂದು ಬಾರಿ ನನಗಿಷ್ಟು ವೇತನ ಸಿಕ್ಕರೆ ಇಲ್ಲೇ ನಿಲ್ಲುತ್ತೇನೆ ಅನ್ನು, ಈಗ ಕೈಯಲ್ಲಿರುವ ಆಫರಿಗೆ ಸ್ವಲ್ಪ ಕೂಡಿಸಿಯೇ ಹೇಳು. ಪರವಾಗಿಲ್ಲ. ನಿನ್ನ ಡಿಮಾಂಡನ್ನು ನಿನ್ನ ಸೀನಿಯರ್ ಎನ್ನುವ ನೆಲೆಯಲ್ಲಿ ಮ್ಯಾನೇಜ್‌ಮೆಂಟಿಗೆ ತಿಳಿಸಿ ನಿನ್ನ ಪರವಾಗಿ ಪ್ರಯತ್ನ ಮಾಡುತ್ತೇನೆ. ಮ್ಯಾನೇಜ್‌ಮೆಂಟ್ ಒಪ್ಪಿಕೊಳ್ಳಲಿ ಬಿಡಲಿ, ನನ್ನೊಂದಿಗೆ ಕೆಲಸ ಮಾಡಿದ್ದ ಹುಡುಗನೊಬ್ಬನ ಪರವಾಗಿ ಪ್ರಯತ್ನ ಪಟ್ಟ ಸಮಾಧಾನ ನನಗಿರುತ್ತೆ' ಅಂತ ಪಂಚಿಂಗ್ ಡಯಲಾಗ್ ಹೊಡೆದು ಗೌರವನಿಂದ ಕಂಪೆನಿಯಲ್ಲೇ ಮುಂದುವರೆಯಲು ಆತ